ರಾ ಗ – ಮ ಧ್ಯ ಮಾ ವ ತಿ  :  ತಾ ಳ – ಅ ಟ ತಾ ಳ

ಬಾರೋ ಗುರು ರಾಘವೇಂದ್ರ ।

ಬಾರಯ್ಯ ಬಾ ಬಾ ಬಾರೋ ಗುರು ರಾಘವೇಂದ್ರ । ಪ ।

ಹಿಂದು ಮುಂದಿಲ್ಲೆನಗೆ ನೀ ಗತಿ ಯೆಂದು ನಂಬಿದೆ ನಿನ್ನ ಪಾದವ ।

ಬಂಧನವ ಬಿಡಿಸೆನ್ನ ಕರಪಿಡಿ ನಂದಕಂದ ಮುಕುಂದ ಬಂಧು । ಅ ಪ ।

ಸೇವಕನೆಲೊ ನಾನು । ಧಾವಿಸಿ ಬಂದೆನು । ಸೇವೆಯ ನೀಡೆಲೊ ನೀನು ॥

ಸೇವಕನ ಸೇವೆಯನು ಸೇವಿಸಿ । ಸೇವ್ಯ ಸೇವಕ ಭಾವವೀಯುತ ॥

ತಾವುಗಾಣಿಸಿ ಪೊರೆಯೊ ಧರೆಯೊಳು ।ಪಾವನಾತ್ಮಕ ಕಾವ ಕರುಣಿ । ೧ ।

ಕರೆದರೆ ಬರುವಿಯೆಂದು । ಸಾರುವುದು ಡಂಗುರ ।

ತ್ವರಿತದಿ ಒದಗೋ ಬಂದು ॥

ಜರಿಯ ಬೇಡವೊ ಬರಿದೆ ನಿನ್ನಯ ।

ವಿರಹ ತಾಳದೆ ಮನದಿ ಕೊರಗುವೆ ॥

ಹರಿಯ ಸ್ಮರಣೆಯ ನಿರುತದಲಿ ಎನಗ್ಹರುಷದಲಿ ನೀ ನಿರುತ ಕೊಡುತಲಿ। ೨ ।

ನರಹರಿ ಪ್ರಿಯನೇ ಬಾ ।

ಗುರುಶ್ರೀಶವಿಟ್ಠಲನ ಕರುಣಾಪಾತ್ರನೇ ಬೇಗ ಬಾ ॥

ಗುರುವರನೆ ಪರಿಪೋಷಿಸೆನ್ನನು । ಮರೆಯದಲೆ ತವ ಶರಣ ಕೋಟಿಯ–

ಲಿರಿಸಿ ಚರಣಾಂಬುಜವ ತೋರುತ ತ್ವರಿತದಲಿ ಓಡೋಡಿ ಬಾ ಬಾ । ೩ ।